**ಚಾಸಾ- 5 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ.23103/2012**

| | |
|---|---|
| **ಸಾಕ್ಷಿದಾರರ ಹೆಸರು** | ರಾಜ್ ಕುಮಾರ್.ಎಸ್. |
| **ತಂದೆಯ ಹೆಸರು** | ಸಿದ್ದಲಿಂಗಯ್ಯ. |
| **ವಯಸ್ಸು** | 56 ವರ್ಷ. |
| **ಉದ್ಯೋಗ** | ಕಾರ್ಪೆಂಟರ್, |
| **ವಾಸ** | ಮಾದನಾಯಕನಹಳ್ಳಿ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 14.08.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಈ ಪ್ರಕರಣದ ಆರೋಪಿ ನನಗೆ ಗೊತ್ತಿಲ್ಲ. ಅದೇ ರೀತಿ ಚಾಸಾ-1 ರಿಂದ 4 ರವರು ಸಹ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನಗೆ ಏನು ಗೊತ್ತಿಲ್ಲ. ನಾನು ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲಗೆಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

ದಿ.13.01.2010 ರಂದು ನಮ್ಮ ಮನೆಯಲ್ಲಿದ್ದ ಇದ್ದ 27.9 ಗ್ರಾಂ ಚಿನ್ನದ ನೆಕ್ಲೆಸ್ ನ್ನು ರೂ.28,000/-ಗಳಿಗೆ ನಾನು ಮಣಪುರಂ ಜನರಲ್ ಲೀಜಿಂಗ್ ಪ್ರೈ.ಲಿ ಎಂಬ ಬ್ಯಾಂಕಿನಲ್ಲಿ ಅಡಮಾನ ಮಾಡಿ ಹಣವನ್ನು ಪಡೆದಿದ್ದೆ ಎಂದರೆ ಸರಿ. ನಾನು ದಿ.04.06.2010 ರಂದು ಬ್ಯಾಂಕಿನಲ್ಲಿ ಕಂಪನಿಯ ವತಿಯಿಂದ ಆಡಿಟ್ ಮಾಡಿಸಿದಾಗ ನಾನು ಮತ್ತು ನನ್ನಂತೆ ಇದೆ ಬ್ಯಾಂಕಿನಲ್ಲಿ ಚಿನ್ನವನ್ನು ಅಡಮಾನ ಮಾಡಿ ಸಾಲ ಪಡೆದಿದ್ದ ಕಾರ್ತಿಕೆಯನ್ ಹಾಗೂ ರಮೇಶ್ ಎನ್ನುವವರು ಒಟ್ಟು 224 ಗ್ರಾಂ ಚಿನ್ನದ ಒಡವೆಗಳ ಒಟ್ಟು ಬೆಲೆ ರೂ.3,01,700/- ಗಳನ್ನು ಸದರಿ ಬ್ಯಾಂಕಿನಲ್ಲಿ

**ಚಾಸಾ- 5 ಪ್ರಾಸಾ-1**

ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ  ಒಂದನೇ ಆರೋಪಿ  ಮತ್ತು ಅಸ್ಸಿಸ್ಟೆಂಟ್  ಮ್ಯಾನೇಜರ್ ಆದ ಎರಡನೇ ಆರೋಪಿ ಯಾವುದೋ ರೀತಿಯಲ್ಲಿ ದುರುಪಯೋಗಪಡಿಸಿಕೊಂಡಿದ್ದು ಈ ಬಗ್ಗೆ ಅವರುಗಳ ವಿರುದ್ದ ದಿ.10.06.2010 ರಂದು ಯಶವಂತ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.  ಈ ರೀತಿ ಆರೋಪಿತರು ಗ್ರಾಹಕರಿಗೆ ಚಿನ್ನವನ್ನು ಹಿಂತಿರುಗಿಸದೇ ನಂಬಿಕೆ ದ್ರೋಹ ಮಾಡಿ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರು  ನಿಪಿ.1 ರಂತೆ ನಾನು ನನ್ನ ಹೇಳಿಕೆಯನ್ನು  ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ  ಸವಾಲು : ಶ್ರೀ.ಎಸ್ ಟಿ ಎಂ ಆರೋಪಿತರ ಪರ ವಕೀಲರು ಪಾಟೀಸವಾಲು   ಏನು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**